(SRI KADIDAL MANJAPPA)

(*b*) Further alternatives are being got investigated with a view to preparing a scheme which is less costly than the one already prepared.

(*c*) No decision has yet been taken. The question will be considered on receipt of final proposals.

ಶ್ರೀ ಟಿ. ನಾಗಪ್ಪ.—"ಎ" ಪ್ರಶ್ನೆಗೆ ಉತ್ತರವಾಗಿ ಎರಡು ಸಾರಿ ಎಂಬುದಾಗಿ ತಿಳಿಸಿದ್ದಾರೆ. ಮೊದಲನೆಯ ಸಾರಿ ಅಂದಾಜು ತಯಾರಿಸಿದ್ದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—1948 ನೆಯ ಇಸವಿಯಲ್ಲಿ.

ಶ್ರೀ ಟಿ. ನಾಗಪ್ಪ.—ಆಗ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಯಾರಾಗಿದ್ದರು ?

ಶ್ರೀ ಕಡಿದಾಳ್ ಮಂಜಪ್ಪ.—ಶ್ರೀ ಟಿ. ಮರಿಯಪ್ಪನವರು.

ಶ್ರೀ ಟಿ. ನಾಗಪ್ಪ.—ಎರಡನೆಯ ಸಾರಿ ಇದರ ಅಂದಾಜನ್ನು ಎಷ್ಟಕ್ಕೆ ತಯಾರಿಸಲಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ನುಮಾರು 40 ಲಕ್ಷ ಇರಬಹುದು.

ಶ್ರೀ ಟಿ. ನಾಗಪ್ಪ.—ಇದು ನ್ಯಾಯವಾಗಿದೆ, ಇದನ್ನು ಕೈಗೊಳ್ಳಬಹುದು ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲು ಪ್ರಯತ್ನ ಪಡಲಾಗುತ್ತದೆ.

ಶ್ರೀ ಟಿ. ನಾಗಪ್ಪ.—ಹಿಂದೆ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿಗೆ ಬಿನ್ನವತ್ತಳೆಯನ್ನು ಒಪ್ಪಿಸಿದ್ದ ಸಮಯದಲ್ಲಿ ಅವರು ಇದನ್ನು 1955 ನೆಯ ಸಾಲಿನಲ್ಲಿ ಕೈಗೊಳ್ಳಲಾಗುತ್ತದೆ ಎಂದು ಹೇಳಿದ್ದು ಗೊತ್ತೇ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

ಶ್ರೀ ಟಿ. ನಾಗಪ್ಪ.—1955ನೆಯ ಸಾಲಿನಲ್ಲಿ ಏಕೆ ಸೇರಿಸಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಇನ್ನೂ finalise ಆಗಿಲ್ಲ.

ಶ್ರೀ ಟಿ. ನಾಗಪ್ಪ.—ಇದು ಕಾರ್ಯಗತವಾದರೆ ಆ ಪ್ರದೇಶದಲ್ಲಿ 6-7 ಸಾವಿರ ಎಕರೆಗಳಷ್ಟು ಭೂಮಿಯು ಸಾಗುವಳಿಗೆ ಬರಲು ಅನುಕೂಲವಾಗುವುದಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ನುಮಾರು ಆರು ಸಾವಿರ ಎಕರೆಯಷ್ಟು ಪ್ರದೇಶ ಸಾಗುವಳಿಗೆ ಬರಲು ಅನುಕೂಲವಿದೆಯೆಂದು ತಿಳಿದುಬಂದಿದೆ.

ಶ್ರೀ ಟಿ. ನಾಗಪ್ಪ.—ತರೀಕೆರೆ ತಾಲ್ಲೂಕಿನಲ್ಲಿ ನೀರಿನ ಆನರೆಯಿಲ್ಲದೆ ಅನೇಕ ಭಾಗದ ಜಮೀನು ಪ್ರದೇಶದಲ್ಲಿ ಘನಲು ಹಾಳಾಗಿಹೋಗಿರುವುದು ಗೊತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಟಿ. ನಾಗಪ್ಪ.—ಈ ಪ್ರದೇಶದ ಜಮೀನು ಮುಂದೆ ಬಹಳ ಬೆಲೆ ಬಾಳುತ್ತದೆಂದು ಸಾಗುವಳಿಗೆ ಕೊಟ್ಟ ಜಮೀನನ್ನು ಸರ್ಕಾರದವರು ಪಾಪಸ್ಸು ಪಡೆಯುತ್ತಿದ್ದಾರೆ. ಆದಕಾರಣ ಬೇಗ ಈ ಕೆಲಸ ಕೈಗೊಳ್ಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಕೆಲಸ ಕೈಗೊಳ್ಳಲು ನುಮಾರು 40 ಲಕ್ಷ ರೂಪಾಯಿಗಳಷ್ಟು ಪೆಚ್ಯೆವಾಗುವುದರಿಂದ ಪ್ಲಾನಿಂಗ್ ಕಮಿಷನ್‌ನವರು ಈ ಹೊಸ ಯೋಜನೆ ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ಆದುದರಿಂದ ಬಹುಶಃ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು ಸೇರಿಸಲು ಪ್ರಯತ್ನ ಪಡುತ್ತೇವೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಪಂಚವಾರ್ಷಿಕ ಯೋಜನೆಯಲ್ಲಿ ಸೇರಿರತಕ್ಕವುಗಳಲ್ಲಿ ಕೈಬಿಟ್ಟರ ತಕ್ಕ ಯೋಜನೆಗಳಾವುವು ?

Mr. SPEAKER.—Too general a question.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಸೇರಿಸಲು ಅಂದಾಜು ಸಿದ್ಧಗೊಳಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಮಾಡುತ್ತೇವೆ.

Repair of Tanks in Hosakote and Anekal Taluks.

Q.—743. Sri H. T. PUTTAPPA (Hosakote-Anekal–Scheduled Castes).—

Will the Government be pleased to state :—

(*a*) the number of major and minor tanks in Hosakote and Anekal taluks ;

(*b*) out of them, the number of tanks that have breached due to this year's rains ;

(*c*) of them, the names of tanks that have been repaired ?

A.—Sri Kadidal MANJAPPA (Minister for Revenue and Public Works).—

	Major	*Minor*
(*a*) Hosakote Taluk	54	131
Anekal Taluk	45	176

(*b*) Three.

(*c*) 1. Bandahalli Mavakere (Minor Tank).

2. Marasandrahalli Bydanakere (Minor Tank).

3. Umlu Tank (Minor Tank).

ಶ್ರೀ ಎಚ್. ಟಿ. ಪುಟ್ಟಪ್ಪ.—ಹೊಸಕೋಟೆ ಮತ್ತು ಆನೇಕಲ್ ತಾಲ್ಲೂಕುಗಳಲ್ಲಿ ಒಡೆದುಹೋಗಿರತಕ್ಕ ಕೆರೆಗಳನ್ನು ಕಟ್ಟಿಸಿಕೊಡಬೇಕೆಂಬ ಬಗ್ಗೆ ಸರ್ಕಾರಕ್ಕೆ ಅರ್ಜಿಗಳು ಬಂದಿವೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಬಂದಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಆ ಅರ್ಜಿಗಳು ಯಾವುವು ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಹೇಳುವುದಕ್ಕಾಗುವುದಿಲ್ಲ. ಆದರೂ ಮಳೆಗಾಲದಲ್ಲಿ ಒಣಗಿಹೋಗಿದ್ದ ಮೂರು ಕೆರೆಗಳನ್ನು ದುರಸ್ತಿ ಮಾಡಿಸಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಮಾರನಹಳ್ಳಿ ಕೆರೆ ಕಟ್ಟಿಸಬೇಕೆಂದು ಮನವಿ ಬಂದು, ಆ ಬಗ್ಗೆ ಅಂದಾಜು ತಯಾರಾಗಿ, ಅದಕ್ಕಾಗಿ ರೈತರು 500 ರೂಪಾಯಿಗಳ ಮುಚ್ಚಳಿಕೆ ಬರೆದು ಕೊಟ್ಟಿರುವುದು ಸರ್ಕಾರಕ್ಕೆ ಗೊತ್ತೇ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಮೂರು ಕೆರೆಗಳನ್ನು ದುರಸ್ತಿ ಮಾಡಿಸಿರುವ ವಿಚಾರ ತಿಳಿಸಿದೆ. ಬಾಕಿ ಕೆರೆಗಳ ವಿಚಾರ ಕೇಳಿದರೆ ನೋಟೀಸ್ ಬೇಕು.

Absorption of Unemployed men in Government Offices and Concerns.

Q.—807. **Sri P. R. RAMAIYA** (Basavangudi).—

Will the Government be pleased to state :—

(*a*) how many of the unemployed educated young men had applied for jobs in Government Departments and Government-run industrial concerns during the years 1952-53 and 1953-54;

(*b*) how many of the applicants received jobs?

A.—**Sri Kadidal MANJAPPA** (Minister for Revenue and Public Works).—

(*a*) Total number of persons both men and women who had applied for jobs in Government Departments and Government Industrial Concerns during the year 1952-53 :— 13,565.

During the year 1953-54 (from 1st April 1953 up to 19th February 1954) :— 43,448.

(Separate figures for men and women are not available).

(*b*) 1. Total number of candidates both men and women assigned in the approved lists for the year 1952-53 :— 2,083.

2. Total number of candidates recommended after interview by the Commission for the posts in the subordinate service advertised during the year 1952-53 :—209.

3. Total number of candidates recommended by the Commission without interview for 671 vacancies and posts advertised during the year 1952-53 :— 3,653.

4. Total number recommended for the posts in the Gazetted Service during the year 1952-53 :— 18.

Information regarding the total number appointed is not available.

Information for the year 1953-54 is not available as the figures for the year 1953-54 have not yet been compiled.

ಶ್ರೀ ಪಿ. ಆರ್. ರಾಮಯ್ಯ.—'ಎ' ಭಾಗದ ಪ್ರಶ್ನೆಗೆ ಉತ್ತರವಾಗಿ Government Departments and Government Industrial concerns—ಎರಡೂ ಸೇರಿ 13,565 ಎಂದು ತಿಳಿಸಿದ್ದೀರಿ. ಇದರ ಹೆಕ್ಕೆ Government Department ನಲ್ಲಿ ಎಷ್ಟು ಮತ್ತು Government Industrial concerns ನಲ್ಲಿ ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ—ಆ ಅಂಕಿ ಅಂಶ ನನ್ನ ಲ್ಲಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—Compile ಮಾಡುವುದು ಕಷ್ಟವೇ?

ಶ್ರೀ ಕಡಿದಾಳ್ ಮಂಜಪ್ಪ —Compile ಮಾಡಬಹುದು.

ಶ್ರೀ ಪಿ. ಆರ್. ರಾಮಯ್ಯ.—ಇನ್ನು ಮುಂದೆ ಮಾಡುತ್ತೀರಾ?

ಅಧ್ಯಕ್ಷರು.—ಕೇಳಿದರೆ, ಯೋಚಿಸುತ್ತಾರೆ.

Sri P. R. RAMAIYA.—"Separate figures for men and women are not available" ಎಂಬುದಾಗಿ ತಿಳಿಸಿದ್ದೀರಿ. ಇದು ಅತ್ಯಗತ್ಯವಲ್ಲವೇ! ಇದರಲ್ಲಿ ಕಷ್ಟವೇನು?

Sri Kadidal MANJAPPA.—We don't make any distinction between men and women.

ಶ್ರೀ ಪಿ. ಆರ್. ರಾಮಯ್ಯ.—ಆ distinction ನಾನು ಕೇಳುತ್ತಿರುವುದಕ್ಕೆ ಕಾರಣವಿಷ್ಟೆ: ಈಗ women ಮುಂದೆ ಮುಂದೆ ಬರುತ್ತಿರುವುದರಿಂದ, ಹೆಚ್ಚಾಗಿ ಎಷ್ಟು ಬಂದಿರುತ್ತಾರೆ, ಅವರಲ್ಲಿ unemployment ಎಷ್ಟಿದೆ ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ.

Sri Kadidal MANJAPPA.—There is no need for classifying on the basis of sex.

ಶ್ರೀ ಪಿ. ಆರ್. ರಾಮಯ್ಯ.—ಆ ಮೇಲೆ total number of candidates recommended after interview by the Commission for the posts in the subordinate service advertised during the year 1952-53 is 209 ಎಂದು ಹೇಳಿದ್ದೀರಿ. ಈ ರೀತಿಯ interview ಗೆ ಕಾರಣವೇನು?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು cases interview ಮಾಡಿ ಕಳುಹಿಸಿರುತ್ತಾರೆ. ಇನ್ನು ಕೆಲವು cases ಹಾಗೆಯೇ ಕಳುಹಿಸಿರುತ್ತಾರೆ.

ಶ್ರೀ ಪಿ. ಆರ್. ರಾಮಯ್ಯ.—ಆ ರೀತಿ interview ಮಾಡದೆ ಕಳುಹಿಸಿರುವ cases ಯಾವುವು?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಪಿ. ಆರ್. ರಾಮಯ್ಯ.—"Total number recommended for the posts in the Gazetted Service during 1952-53 is 18" ಎಂಬುದಾಗಿ ಹೇಳಿದ್ದೀರಿ. ಆದರೆ ಇದಕ್ಕೆ apply ಮಾಡಿದವರೆಷ್ಟು ಮಂದಿ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.